ಆಗದಿದ್ದರೆ, ಸುಗ್ರೀವಾಜ್ಞೆಯನ್ನಾದರೂ ಹೊರಡಿಸಿ ಮಾಡಲು ಪ್ರಯತ್ನ ಮಾಡುತ್ತೇವೆ. ಈ ಅಧಿವೇಶನದಲ್ಲೇ ತರಲು ಪ್ರಯತ್ನ ಮಾಡುತ್ತೇನೆ. ಆದರೆ ಬಹಳ ಸಂತೋಷ. ಇಲ್ಲದಿದ್ದರೆ, ಸುಗ್ರೀವಾಜ್ಞೆಯನ್ನು ತಂದು ಅವರೆಲ್ಲರಿಗೂ ನಮ್ಮ ಕಾಲದಲ್ಲೇ, ಇನ್ನು 2-3 ತಿಂಗಳೊಳಗಾಗಿ ಹಕ್ಕುಪತ್ರ ಕೊಡತಕ್ಕಂಥಾದ್ದನ್ನು ಮಾಡುತ್ತೇವೆ, ಇದು ಒಂದು. ಏಲಿನೇಷನ್ ಮಂಜೂರು ಮಾಡುವುದಕ್ಕೆ ಸರ್ವೆ ನಂಬರುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಅದು ಅನೇಕ ಕಾರಣಗಳಿಂದ ಮಂಜೂರಾತಿ ಆಗಿಲ್ಲ. ನೀತಿನಿಯಮಗಳ ಪ್ರಕಾರ ಅವರು ಮನೆಗಳನ್ನು ಕಟ್ಟಿಕೊಂಡಿಲ್ಲ. ಆದರೂ ಅವರು ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಏಲನೇಷನ್ ಮಂಜೂರಾತಿ ಆಗದೇ ಇದ್ದರೆ ಅವರಿಗೆ ಏನೂ ತೊಂದರೆ ಇಲ್ಲ. ಅದು ಖಾಸಗಿ ಜಮೀನುಗಳು. ಅದಕ್ಕೆ ತಿದ್ದುಪಡಿ ಅವಶ್ಯಕತೆಯಿಲ್ಲ. ನಾವೇ ರೂಲ್ಸ್ ಬದಲಾವಣೆ ಮಾಡಬಹುದು. ಅದನ್ನು ತಕ್ಷಣ ಮಾಡುತ್ತೇವೆ. ಆದ್ದರಿಂದ ಈ ಎರಡು ತಿದ್ದುಪಡಿಗಳು ಆದರೆ ಬಹುಶಃ ಈ ಎಲ್ಲಾ ತೊಂದರೆಗಳಿಗೆ ಶಾಶ್ವತವಾದ ಪರಿಹಾರ ಸಿಗುತ್ತದೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಜಯರಾಮ ಶೆಟ್ಟಿ ಕೆ :— ಧನ್ಯವಾದಗಳು.

(ಎ) ಬಿಜಾಪುರದಲ್ಲಿ ಕೇಂದ್ರೀಯ ಮಹಾವಿದ್ಯಾಲಯ.

ಶ್ರೀ ಶಿವಾನಂದ ಸಿದ್ದರಾಮಪ್ಪ ಪಾಟೀಲ್ (ಟಿಕೋಟಾ) :— ಮಾನ್ಯ ಉಪಾಧ್ಯಕ್ಷರೆ, ಬಿಜಾಪುರದಲ್ಲಿ ಕೇಂದ್ರೀಯ ಮಹಾವಿದ್ಯಾಲಯ ಎಂದು ಒಂದು ಶಾಲೆಯನ್ನು ಕೇಂದ್ರ ಸರ್ಕಾರದ ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್ ಮಿನಿಸ್ಟ್ರಿಯಿಂದ ಮಂಜೂರು ಮಾಡಲಾಗಿದೆ. ಸದರಿ ಶಾಲೆ ಮಂಜೂರಾಗಿ ಈಗಾಗಲೇ ಮೂರು ವರ್ಷ ಕಳೆದಿದೆ. ಅದು ಮಂಜೂರು ಆದಂಥ ಸಂದರ್ಭದಲ್ಲಿ ಬಿಜಾಪುರದ ಜಿಲ್ಲಾಧಿಕಾರಿಯವರು ಸದರಿ ಶಾಲೆಗೆ 14 ಎಕರೆ ಜಮೀನನ್ನು ಕೊಡಬೇಕೆಂದು ಸರ್ಕಾರಕ್ಕೆ ವಿನಂತಿಯನ್ನು ಸಲ್ಲಿಸಿದ್ದರು. ಅದಕ್ಕೆ ಸರ್ಕಾರಿ ಅಧಿಕಾರಿಗಳು ನಾಲ್ಕು ಪಾಯಿಂಟ್ಸ್‌ಗಳಿಗೆ ಕ್ಲಾರಿಫಿಕೇಷನ್ ಕೇಳಿ ಒಂದು ಪತ್ರ ಬರೆದಿದ್ದರು. ಕಳೆದ ಒಂದೂವರೆ ವರ್ಷದ ಹಿಂದೆಯೇ ಜಿಲ್ಲಾಧಿಕಾರಿಯವರು ಸದರಿ ಪಾಯಿಂಟ್ಸ್‌ಗೆ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ' ಏನ್ನುವ ಗಾದೆಯಂತೆ ಆಗಿದೆಯೆಂದು ನನಗನ್ನಿಸುತ್ತದೆ. ಸುದ್ಯೆವದಿಂದ ಬಿಜಾಪುರ ಜಿಲ್ಲೆಗೆ ಕೇಂದ್ರೀಯ ಮಹಾವಿದ್ಯಾಲಯ ಶಾಲೆ ಮಂಜೂರು ಆಗಿದ್ದು ಈಗಾಗಲೇ 3 ವರ್ಷ ಗತಿಸಿದೆ. ಶಾಲೆಗೆ ಜಾಗ ಇಲ್ಲದಿರುವುದರಿಂದ ಈ ವರ್ಷ ಮಕ್ಕಳನ್ನು ಶಾಲೆಗೆ ಅಡ್ಮಿಷನ್ ಮಾಡಿಕೊಳ್ಳುವುದೂ ಕೂಡ ನಿಂತು ಹೋಗಿದೆ. ಶಾಲೆಗೆ ಕೇಳಿದಂಥ ಜಾಗ ಗೋಮಾಳ ಜಾಗ ಅಲ್ಲ. ಇದು ಸರ್ಕಾರಿ ಜಮೀನು ಆಗಿರುತ್ತದೆ. ಮತ್ತು ಅಲ್ಲಿ ಈಗಾಗಲೇ ಅನೇಕ ಸಂಸ್ಥೆಗಳಿಗೆ, ಶಾಲೆಗಳಿಗೆ ಜಾಗಗಳನ್ನು ಕೊಟ್ಟಾಗಿದೆ. ಆದರೆ ಸದರಿ ಶಾಲೆಗೆ ಜಮೀನು ನೀಡುವುದಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷದಿಂದ

ಸರ್ಕಾರದ ಮಟ್ಟದಲ್ಲಿಯೇ ಪೆಂಡಿಂಗ್‌ನಲ್ಲಿ ಇರುವುದರಿಂದ ಇದಕ್ಕೆ ಸೂಕ್ತ ಗಮನಹರಿಸಿ, ಪರಿಹಾರ ಕಂಡುಹಿಡಿದು ತ್ವರಿತವಾಗಿ ಈ ಜಾಗವನ್ನು ಮಂಜೂರು ಮಾಡಿಕೊಂಡಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) :— ಮಾನ್ಯ ಉಪಾಧ್ಯಕ್ಷರೇ, ವಿಜಾಪುರ ತಾಲ್ಲೂಕಿನ ಭೂತನಾಳ ಗ್ರಾಮದಲ್ಲಿ 'ಕೇಂದ್ರೀಯ ವಿದ್ಯಾಲಯ' ಸ್ಥಾಪನೆಗಾಗಿ ಸರ್ವೆ ನಂ. 38`ಎ'ನಲ್ಲಿ 14 ಎಕರೆ 12 ಗುಂಟೆ ಜಮೀನನ್ನು ಕೇಳುತ್ತಿದ್ದಾರೆ. ಇದರ ಬಗ್ಗೆ ಬೆಳಗಾಂ ವಿಭಾಗಾಧಿಕಾರಿಗಳಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಆ ಪ್ರಸ್ತಾವನೆ ಪ್ರಕಾರ ಇದು ಗೋಮಾಳ ಜಮೀನು ಆಗಿದೆ ಎಂದು ಬರೆದಿದ್ದಾರೆ. ಗೋಮಾಳ ಜಮೀನನ್ನು ಮಂಜೂರು ಮಾಡುವುದಕ್ಕೆ ನಮ್ಮ ಸಚಿವ ಸಂಪುಟದ ನಿರ್ಬಂಧ ಇದೆ. ಗೋಮಾಳ ಜಮೀನನ್ನು ಕೊಡುವುದಾದರೆ ಯಾವ ಯಾವುದಕ್ಕೆ ಕೊಡಬೇಕು, ಮತ್ತು ಎಷ್ಟು ಎಕರೆ ಜಮೀನನ್ನು ಕೊಡುವುದಾದರೆ ಯಾವ ಯಾವುದಕ್ಕೆ ಕೊಡಬೇಕು, ಈ ಎಲ್ಲಾ ವಿಚಾರಗಳನ್ನು ನೋಡಿ ಸಮಗ್ರವಾದಂಥ ಚಿಂತನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಸದರಿ ಶಾಲೆಗೆ ಮಂಜೂರು ಮಾಡಬೇಕಾದ ಜಮೀನಿನ ಬಗ್ಗೆ ನಿರ್ಧಾರ ತೆಗೆದುಕೊಳ್ಳದೆ ಮುಂದಕ್ಕೆ ಹಾಕಿದ್ದೇವೆ. ಇಷ್ಟರಲ್ಲಿಯೇ ನಾವು ಈ ವಿಚಾರವನ್ನು ಸಚಿವಸಂಪುಟಕ್ಕೆ ತೆಗೆದುಕೊಂಡು ಹೋಗಿ ನೀತಿ ನಿಯಮವನ್ನು ರೂಪಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ ಅದು ಗೋಮಾಳ ಜಮೀನು ಅಲ್ಲವೆಂದು ಹೇಳಿದರು. ಅದು ಗೋಮಾಳ ಜಮೀನು ಅಲ್ಲದಿದ್ದರೆ ಮತ್ತೊಮ್ಮೆ ಪರಿಶೀಲನೆ ಮಾಡುತ್ತೇವೆ. ಅದು ಗೋಮಾಳ ಜಮೀನು ಅಲ್ಲದಿದ್ದು ಅದಕ್ಕೆ ಯಾವುದೇ ನಿರ್ಬಂಧ ಇಲ್ಲದಿದ್ದರೆ ಅದನ್ನು ಖಂಡಿತವಾಗಿ ಮಂಜೂರು ಮಾಡುತ್ತೇವೆ. ಗೋಮಾಳ ಜಮೀನು ಆಗಿದ್ದರೆ ನೀತಿನಿಯಮವನ್ನು ರೂಪಿಸಲು ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :— ಮಾನ್ಯ ಉಪಾಧ್ಯಕ್ಷರೇ, ಶಾಲೆಗೆ ಸರಿಯಾದ ಜಾಗ ಇಲ್ಲದೆ ಅಲ್ಲಿ ಅಡ್ಮಿಷನ್ ಕೂಡ ನಿಂತು ಹೋಗಿದೆ. ಮತ್ತು ಸದರಿ ಜಮೀನು ಗೋಮಾಳ ಜಾಗ ಹೌದೇ ಅಥವಾ ಅಲ್ಲವೇ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕೇಳಿದ್ದು, ಆ ಕ್ಲಾರಿಫಿಕೇಷನ್‌ಗೆ ಕಳೆದ ಒಂದೂವರೆ ವರ್ಷದ ಹಿಂದೆ ಉತ್ತರ ಬಂದಿದೆ. ಆದ್ದರಿಂದ ಶಾಲೆಗೆ ಈ ವರ್ಷದ ಮಕ್ಕಳ ಅಡ್ಮಿಷನ್ ಆಗಬೇಕು ಮತ್ತು ಶಾಲೆ ನಡೆಯಬೇಕು. ದಯವಿಟ್ಟು ಅದಕ್ಕೆ ಸರ್ಕಾರದಿಂದ ಏನಾದರೂ ಮಾಡಬೇಕು. ಈ ಶಾಲೆ, ಜಮೀನು ಸಾರ್ವಜನಿಕರಿಗೆ ಹಸ್ತಾಂತರ ಆಗುವುದಿಲ್ಲ. ಇದು ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್ ಮಿನಿಸ್ಟ್ರಿ ಹೆಸರಿನಲ್ಲಿ ಇರುತ್ತದೆ. ಇದಕ್ಕೆ ಜಿಲ್ಲಾಧಿಕಾರಿಗಳು ಚೇರ್‌ಮನ್ ಆಗಿರುತ್ತಾರೆ. ಯಾರೋ ಸಾರ್ವಜನಿಕರು ಇದರ ಚೇರ್‌ಮನ್ ಆಗಿರುವುದಿಲ್ಲ. ದಯವಿಟ್ಟು ಇದಕ್ಕೆ ಕೂಡಲೇ ಏನಾದರೂ ಪರಿಹಾರ ಕಂಡುಹಿಡಿದು ಜಾಗ ಒದಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್:— ಮಾನ್ಯ ಉಪಾಧ್ಯಕ್ಷರೇ, ಆ ಜಮೀನನ್ನು ಕೊಡಬಾರದೆಂದು ಸರ್ಕಾರದ ಉದ್ದೇಶವಲ್ಲ. ಜಮೀನನ್ನು ಕೊಡಲೇಬೇಕು. ಏಕೆಂದರೆ ಅದು ಖಾಸಗಿ ಜಮೀನು ಅಲ್ಲ, ಮತ್ತು ಅದು ಖಾಸಗಿ ವ್ಯಕ್ತಿಗಳಿಗೆ ಹೋಗುವುದಿಲ್ಲ. ಸರ್ಕಾರದಲ್ಲಿಯೇ ಇರುತ್ತದೆ. ಸಾರ್ವಜನಿಕರ ಸ್ವತ್ತು ಆಗಿರುತ್ತದೆ. ಶಾಲೆಗೆ ಜಾಗ ನೀಡುವ ಬಗ್ಗೆ ಸರ್ಕಾರದಿಂದ ಸಂಪೂರ್ಣವಾದ ಸಹಕಾರ ಇದೆ. ಆದರೆ ಅದನ್ನು ಮತ್ತೊಂದು ಸಲ ಪರಿಶೀಲನೆ ಮಾಡಿ ಸಧ್ಯದಲ್ಲಿಯೇ ತೀರ್ಮಾನ ತೆಗೆದುಕೊಳ್ಳುತ್ತೇವೆ.

(ಏ) ಬೆಂಗಳೂರು ದಕ್ಷಿಣ ಭಾಗದ ಸರ್ವೆ ನಂ.29ರಲ್ಲಿ ಜೆಲ್ಲಿ ತೆಗೆಯಲು ಅವಕಾಶ

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ):— ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ದಕ್ಷಿಣ ಭಾಗದ ಸರ್ವೆ ನಂ. 29ರಲ್ಲಿ ಒಂಟಿ ಮನೆ ಬಾಳೆಗುತ್ತ ಬಂಡೆ, ಬೆಟ್ಟದಾಸನಪುರ, ಬೇಗೂರು ಇಲ್ಲಿಗೆ ಅಟ್ಲಾಂಟಿಕ್ ಗ್ರೂಪ್ ಆಫ್ ಕಂಪನಿ ಎನ್ನುವ ಹೆಸರಿನ ಕಂಪನಿಗೆ ಜೆಲ್ಲಿ ತೆಗೆಯಲಿಕ್ಕೆ ಸರ್ಕಾರ ಅವಕಾಶ ಕಲ್ಪಿಸಿದೆ ಅಂದರೆ ಈಗ ಕೆಲಸ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಕೆಲವು ಕಾನೂನುಕಟ್ಟಳೆ ಒಳಗೆ ಅವಕಾಶ ಕೊಡಬೇಕೆಂದು ಸರ್ಕಾರ ಅಳವಡಿಸಿಕೊಂಡಿದೆ. ಜೆಲ್ಲಿ ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಒಂದು ಊರಿನ ಮಧ್ಯ ಭಾಗದಲ್ಲಿ. ಅಲ್ಲಿ ಡೈರಿ ಫಾರ್ಮ್, ಪೌಲ್ಟರಿ ಫಾರ್ಮ್ ಇದೆ. ಅಲ್ಲಿ ವ್ಯವಸಾಯ ನಡೆಯುತ್ತಿದೆ. ಇಷ್ಟರ ಮಧ್ಯದಲ್ಲಿ ಈ ಕಂಪನಿಗೆ ಜೆಲ್ಲಿ ತೆಗೆಯುವುದಕ್ಕೆ ಅವಕಾಶ ಕೊಟ್ಟಿರುವುದು ಏಕೆ? ಇವರಿಗೆ ಲೈಸೆನ್ಸ್ ಕೊಟ್ಟಿರುವುದು ಸರಿಯಾಗಲಾರದು, ಏಕೆಂದರೆ ಇದಕ್ಕೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡಿನ ಅನುಮತಿ ಇಲ್ಲ. ಕಾನೂನು ಚೌಕಟ್ಟಿನೊಳಗೆ ಈ ಕಂಪನಿಗೆ ಲೈಸೆನ್ಸ್ ಕೊಟ್ಟಿದೆಯೇ? ಆ ಜಾಗವನ್ನು ಕೊಡಬೇಕಾದರೆ ಅದು ಕಂದಾಯ ಇಲಾಖೆಗೆ ಸಂಬಂಧಪಟ್ಟಿತ್ತೇ, ಅರಣ್ಯ ಇಲಾಖೆಗೆ ಸಂಬಂಧಪಟ್ಟಿತ್ತೇ ಅಥವಾ ಯಾವ ಇಲಾಖೆಗೆ ಆ ಜಾಗ ಒಳಪಟ್ಟಿತ್ತು? ಯಾವ ಆಧಾರದ ಮೇಲೆ ಆ ಕಂಪನಿಗೆ ಸದರಿ ಜಾಗವನ್ನು ಗುತ್ತಿಗೆಗೆ ಕೊಟ್ಟಿದ್ದೀರಿ? ನಿನ್ನೆಯ ದಿವಸ ಕೂಡ ಸದನದಲ್ಲಿ ಮರಳು ಸಾಗಿಸುವ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಕಲ್ಲು ಮತ್ತು ಮರಳು ಯಥೇಚ್ಛವಾಗಿ ಹೋಗುತ್ತಿದೆ. ಇದರ ಲೂಟಿಯಾಗಿ ಯಾರಿಗೋ ಹಣ ಹೋಗುತ್ತದೆ ಸರ್ಕಾರಕ್ಕೆ ಸರಿಯಾಗಿ ಬರುವುದಿಲ್ಲ. ನಮ್ಮ ಏರಿಯಾದ ಬಾರ್ಡರ್‌ಗೆ ಹೇಮಾವತಿ ನದಿ ಬರುತ್ತದೆ. ಈ ನದಿಯ ತೀರದಲ್ಲಿಯ ಮರಳು ಬೆಂಗಳೂರಿಗೆ ಲಾರಿ ಮೂಲಕ ಸರಬರಾಜು ಆಗುತ್ತದೆ. ಒಬ್ಬ ವ್ಯಕ್ತಿ 1500 ರೂ.ಗಳನ್ನು ಸರ್ಕಾರಕ್ಕೆ ಕೊಟ್ಟು ಲೈಸೆನ್ಸ್‌ನ್ನು ತೆಗೆದುಕೊಂಡರೆ ಅವನು 5 ವರ್ಷ ಎಷ್ಟು ಬೇಕಾದರೂ ಮರಳನ್ನು ತೆಗೆದುಕೊಂಡು ಹೋಗಬಹುದು. ಈ ರೀತಿಯ ಕಾನೂನು ಸರ್ಕಾರದಲ್ಲಿ ಇದೆ. ದಿವಸಕ್ಕೆ ನೂರಾರು ಲೋಡ್ ಮರಳು ಹೋಗುತ್ತದೆ. ಒಂದು ಲೋಡ್ ಮರಳು ಇದ್ದರೆ ಅದಕ್ಕೆ 1000 ರೂ.ಗೆ ಮಾರಾಟ ಮಾಡುತ್ತಾರೆ. ಇದೇ ರೀತಿ ಕಲ್ಲಿನ ವ್ಯವಹಾರ ಕೂಡ ನಡೆಯುತ್ತದೆ. ಸದರಿ ಜಾಗದಲ್ಲಿ ಜೆಲ್ಲಿ ತೆಗೆಯುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆಯೇ ಅಥವಾ